ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE : 8/7/2020

## ಎಲ್ಲ ಶಾಲಾ ಮಕ್ಕಳಿಗೆ ಅಗತ್ಯ ಸುಧಾರಣಾ ಕ್ರಮಗಳೊಂದಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣ

# ಆನ್‌ಲೈನ್ ಬೋಧನೆಗೆ ಸಮಿತಿ ಒಪ್ಪಿಗೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಕಾಲದಲ್ಲಿ ಆನ್‌ಲೈನ್ ತರಗತಿಗಳಿಗೆ ಯಾವುದೇ ರೀತಿಯ ನಿಷೇಧ ಹೇರದೆ ಕೆಲ ಸುಧಾರಣಾ ಕ್ರಮಗಳು ಮತ್ತು ಅಗತ್ಯ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿ ತಜ್ಞರ ಸಮಿತಿ ಮಂಗಳವಾರ ಸರಕಾರಕ್ಕೆ ವರದಿ ಸಲ್ಲಿಸಿದೆ.

ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ದೃಷ್ಟಿಯಿಂದ ಕೆಲವು ದಿನಗಳ ಹಿಂದೆ ರಾಜ್ಯ ಸರಕಾರ ಎಲ್‌ಕೆಜಿಯಿಂದ 5ನೇ ತರಗತಿವರೆಗಿನ ಮಕ್ಕಳಿಗೆ ಆನ್‌ಲೈನ್ ತರಗತಿಗಳ ಮೂಲಕ ಬೋಧಿಸುವುದನ್ನು ನಿಷೇಧಿಸಿತ್ತು. ನಂತರ, ಹೈಕೋರ್ಟ್ ನಿರ್ದೇಶನದನ್ವಯ ತಜ್ಞರ ಸಮಿತಿ ವರದಿ ನೀಡುವವರೆಗೆ ಈ ಮಕ್ಕಳಿಗೆ ಆನ್‌ಲೈನ್ ತರಗತಿಗಳಿಗೆ ಅನುಮತಿ ನೀಡಿತ್ತು. ಇದೀಗ ತಜ್ಞರ ಸಮಿತಿಯ ವರದಿ ಸಲ್ಲಿಕೆಯಾಗಿದ್ದು, ಯಾವುದೇ ತರಗತಿಗೂ ಆನ್‌ಲೈನ್ ಶಿಕ್ಷಣವನ್ನು ನಿಷಿದ್ಧಗೊಳಿಸಿಲ್ಲ.

**ಪೂರ್ವ ಪ್ರಾಥಮಿಕ:** 3ರಿಂದ 6 ವರ್ಷ ವಯೋಮಾನದ ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳಿಗೆ (ಎಲ್‌ಕೆಜಿ) ಆಟ, ಕಥೆ, ಪ್ರಾಸ ಸೇರಿದ ನವೀನ ಚಟುವಟಿಕೆಗಳನ್ನು ಮಾತ್ರ ಪಾಲಕರ ಕಡ್ಡಾಯ ಉಪಸ್ಥಿತಿಯಲ್ಲಿ ಆನ್‌ಲೈನ್ ಅಥವಾ ಮುದ್ರಿತ ಬೋಧನಾ ವಿಧಾನದ ಮೂಲಕ ವಾರಕ್ಕೆ ಮೂರು ದಿವಸ, ಪ್ರತಿ ದಿವಸ ಒಂದು ಅವಧಿಯಂತೆ ಕಲಿಸಬಹುದು.

**ಪ್ರಾಥಮಿಕ ಮತ್ತು ಮಾಧ್ಯಮಿಕ**

- 1ರಿಂದ 2ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಆಟ, ಕಥೆಯ ರೂಪದ ನವೀನ ಚಟುವಟಿಕೆಗಳನ್ನು ಮಾತ್ರ ವಾರಕ್ಕೆ ಮೂರು ದಿನ ಹಾಗೂ ಪ್ರತಿದಿವಸ ಎರಡು ಅವಧಿಯ ಕಲಿಕೆಗೆ ಅವಕಾಶ ನೀಡಬಹುದು. ಪಾಲಕರು ಉಪಸ್ಥಿತರಿರಬೇಕು.
- 3ರಿಂದ 5ನೇ ತರಗತಿಗಳಿಗೆ ವಾರಕ್ಕೆ 5 ದಿನ ಮತ್ತು ಪ್ರತಿ ದಿನ 30 ನಿಮಿಷದ 2 ಅವಧಿಗಳಲ್ಲಿ ಆನ್‌ಲೈನ್ ಬೋಧಿಸಬಹುದು.
- 6ರಿಂದ 8ನೇ ತರಗತಿಗೆ 30ರಿಂದ 45 ನಿಮಿಷ ಗರಿಷ್ಠ ಮೂರು ಅವಧಿ ಹಾಗೂ 9 ಮತ್ತು 10ನೇ ತರಗತಿಗೆ ವಿದ್ಯಾರ್ಥಿಗಳಿಗೆ 30ರಿಂದ 45 ನಿಮಿಷ, ಪ್ರತಿ ದಿವಸ ಗರಿಷ್ಠ 4 ಅವಧಿ ಪರ್ಯಾಯ ಕಲಿಕೆಗೆ ಶಿಫಾರಸು ಮಾಡಲಾಗಿದೆ.



**ಟಿವಿ, ರೇಡಿಯೊ ಬಳಕೆ**

ದೂರದರ್ಶನ ಮತ್ತು ರೇಡಿಯೊ ಗರಿಷ್ಠ ವ್ಯಾಪ್ತಿಯನ್ನು ಹೊಂದಿದ್ದು, ಅವುಗಳ ಮೂಲಕ ಪಾಠ- ಪ್ರವಚನಗಳ ಪ್ರಸಾರ ಪ್ರಾರಂಭಿಸಬೇಕು. ಮಕ್ಕಳ ಚಟುವಟಿಕೆಗಳನ್ನು ಕೈಗೊಳ್ಳಲು ಸಾಕಷ್ಟು ಅವಕಾಶಗಳನ್ನು ಒದಗಿಸುವ ವರ್ಕ್‌ಶೀಟ್‌ಗಳು, ಚಟುವಟಿಕೆಯ ಹಾಳೆಗಳು ಮತ್ತು ಹ್ಯಾಂಡ್ ಔಟ್‌ಗಳನ್ನು ನೀಡಬೇಕು ಎಂದು ವರದಿಯಲ್ಲಿ ತಿಳಿಸಿದೆ.

**ಎರಡು ಭಾಗಗಳು**

ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ನೇರ ಪ್ರಸಾರದ ಅಧಿವೇಶನಗಳು (ಸಿಂಕ್ರೋನಸ್) ಮತ್ತು ಪೂರ್ವ ಮುದ್ರಿತ ಅಧಿವೇಶನಗಳು (ಅಸಿಂಕ್ರೋನಸ್) ಎಂದು ಎರಡು ವಿಭಾಗಗಳನ್ನಾಗಿ ವಿಂಗಡಿಸಿ, ಬೋಧನೆಗೆ ಅನುಮತಿ ನೀಡಲಾಗಿದೆ. ಮಕ್ಕಳು ಮತ್ತು ಪೋಷಕರು ನೇರ ಅಧಿವೇಶನಗಳಿಗೆ ಹಾಜರಾಗಲು ಸಾಧ್ಯವಾಗದೇ ಇದ್ದರೆ, ಹಾಜರಾಗುವಂತೆ ಒತ್ತಾಯ ಮಾಡಬಾರದು. ಬದಲಿಗೆ, ನೇರ ಅಧಿವೇಶನಗಳ ಮುದ್ರಣವನ್ನು ಸಾಕಷ್ಟು ಸೈಬರ್ ಸುರಕ್ಷತೆ ಮತ್ತು ದುರುಪಯೋಗವನ್ನು ನಿಷೇಧಿಸುವ ಷರತ್ತುಗಳೊಂದಿಗೆ ಒದಗಿಸಬೇಕು.

ತಂತ್ರಜ್ಞಾನ ಆಧರಿತ ವಿಧಾನವನ್ನು ಬಳಸಲು ಸಾಧ್ಯವಾಗದ ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು. ಹಾಗಾಗಿ, ಶಾಲೆಯಲ್ಲಿ ದೂರಶಿಕ್ಷಣಕ್ಕೆ ತಂತ್ರಜ್ಞಾನ ಬಳಕೆಯು ಏಕೈಕ ಆಯ್ಕೆಯಾಗಬಾರದು. ಯಾವುದೇ ಮಗು ತಂತ್ರಜ್ಞಾನ ಆಧಾರಿತ ಶಿಕ್ಷಣ ಪಡೆಯಲು ಸಾಧ್ಯವಾಗದೇ ಇದ್ದಾಗ, ಶಾಲೆಯು ಅಧಿವೇಶನ ಅಥವಾ ಇತರೆ ಮಾದರಿಗಳ ಮೂಲಕ ಪಾಠಗಳನ್ನು ಮಗುವಿಗೆ ಲಭ್ಯವಾಗುವಂತೆ ಮಾಡಬೇಕು. ಕೋವಿಡ್-19 ಸಂದರ್ಭವನ್ನು ಗಮನದಲ್ಲಿ ಇಟ್ಟುಕೊಂಡು ಪಠ್ಯಕ್ರಮದ ಉದ್ದೇಶಗಳನ್ನು ಪರಿಷ್ಕರಿಸುವ ಅಗತ್ಯವಿದೆ. ನಿಗದಿತ ಪಠ್ಯವಸ್ತುವನ್ನು ಹೇಗಿದೆಯೋ ಹಾಗೇ ಬೋಧಿಸದೆ, ಶಾಲೆಗಳು ಪರ್ಯಾಯ ಶೈಕ್ಷಣಿಕ ಪಠ್ಯಕ್ರಮವನ್ನು ಬೋಧಿಸಲು ಒತ್ತು ನೀಡಬೇಕು. ವಿಶೇಷ ಅಗತ್ಯವಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಪ್ರಸ್ತಾಪಿಸಲಾಗಿದೆ.

**ಶಿಕ್ಷಣ ಸಚಿವರಿಗೆ ವರದಿ ಸಲ್ಲಿಕೆ**

ಬೆಂಗಳೂರು ನಗರದ ಸರ್ವ ಶಿಕ್ಷಣ ಕರ್ನಾಟಕ ಸಭಾಂಗಣದಲ್ಲಿ ವರದಿಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಅವರಿಗೆ ಸಲ್ಲಿಸಿ ಮಾತನಾಡಿದ ತಜ್ಞರ ಸಮಿತಿ ಅಧ್ಯಕ್ಷ ಪ್ರೊ.ಎಂ.ಕೆ.ಶ್ರೀಧರ್, ''ಕೋವಿಡ್-19 ಕಾಲಘಟ್ಟದಲ್ಲಿ ಮಕ್ಕಳ ಕಲಿಕೆಯ ಮುಂದುವರಿಕೆಗೆ ತೊಂದರೆಯಾಗದಂತೆ ಮುಂದುವರೆಸಲು ಮತ್ತು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ವ್ಯತ್ಯಯವಾಗದಂತೆ ಯಾವ ರೀತಿ ತಂತ್ರಜ್ಞಾನ ಆಧಾರಿತ ಶಿಕ್ಷಣ ಮುಂದುವರಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಮಿತಿ ವರದಿ ತಯಾರಿಸಿದೆ,'' ಎಂದರು.

ಇದೇ ವೇಳೆ ಮಾತನಾಡಿದ ಸಮಿತಿ ಸದಸ್ಯ, ಡಾ.ವಿ.ಪಿ.ನಿರಂಜನಾರಾಧ್ಯ, ''ಇದು ಎಲ್ಲಾ ಪ್ರಾಥಮಿಕ ಮೂಲ ವಾರಸುದಾರರನ್ನೊಳಗೊಂಡ ಮತ್ತು ಒಮ್ಮತದ ವರದಿಯಾಗಿದೆ. ತಂತ್ರಜ್ಞಾನವನ್ನು ಶಿಕ್ಷಣವಾಗಿ ಮಾಡುವ ಬದಲು, ಹೇಗೆ ಬಳಸಬಹುದು ಎಂಬುದು ವರದಿಯ ಮೂಲ ಸಾರವಾಗಿದೆ,'' ಎಂದು ಮನವಿ ಮಾಡಿದರು.

ವರದಿ ಸ್ವೀಕರಿಸಿ ಮಾತನಾಡಿದ ಸಚಿವ ಸುರೇಶ್ ಕುಮಾರ್, ''ಸಮಿತಿ ವರದಿಯ ಪೂರ್ಣಪಾಠವನ್ನು ಅಧ್ಯಯನ ಮಾಡಿ, ಅದು ಸೂಚಿಸಿರುವ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಆನ್‌ಲೈನ್ ಶಿಕ್ಷಣ ಕುರಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ನೀಡುವ ತೀರ್ಪಿಗನುಗುಣವಾಗಿ ನಿಯಮಗಳನ್ನು ಸಿದ್ಧಪಡಿಸಿ ಜಾರಿಗೆ ತರಲಾಗುವುದು,'' ಎಂದು ತಿಳಿಸಿದರು.